**ಅಧಿಕ ಸಿವಿಲ್ ಜಡ್ಜ್ ಮತ್ತು ಜೆಎಂಎಫ್ ಸಿ ನ್ಯಾಯಾಲಯ, ಗುಬ್ಬಿ**

**ದಿನಾಂಕಃ-09.02.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ 4 ನೇ ಪ್ರತಿವಾದಿಗಳ ಪರ ಶ್ರೀ .ಆರ್.ವಿ.ವಕೀಲರಿಂದಃ**

ಹೊನ್ನೇಗೌಡರವರ ಮಗ ರಂಗೇಗೌಡರವರ ಅಣ್ಣನ ಹೆಸರು ಚಿಕ್ಕರಂಗಯ್ಯ ಎಂದರೆ ಸರಿ. ಹೊನ್ನೇಗೌಡರವರ ಹೆಂಡತಿಯ ಹೆಸರು ರಂಗಮ್ಮ ಎಂದರೆ ಸರಿಯಲ್ಲ. ರಂಗೇಗೌಡವರ ಹೆಂಡತಿಯ ಹೆಸರು ರಂಗಮ್ಮ. ನಮ್ಮ ಊರಿನಲ್ಲಿ ಹೆಚ್ಚಾಗಿ ರಂಗಯ್ಯ, ರಂಗೇಗೌಡ , ಚಿಕ್ಕರಂಗಯ್ಯ ಮತ್ತು ರಂಗಮ್ಮ ಎಂಬ ಹೆಸರುಗಳ ಜನರು ಇರುತ್ತಾರೆ ಎಂದರೆ ಸರಿ . ಹೆಚ್ಚಿನ ಗ್ರಾಮಸ್ಥರ ಮನೆದೇವರು ರಂಗನಾಥ ಆದ್ದರಿಂದ ರಂಗನಾಥ ಎಂಬ ಹೆಸರಿಟ್ಟುಕೊಂಡಿರುತ್ತಾರೆ ಎಂದರೆ ಸರಿ. ಹೊನ್ನೇಗೌಡರವರ ಮಗ ಚಿಕ್ಕರಂಗಯ್ಯರವರಿಗೆ ಮಕ್ಕಳಿಲ್ಲದ ಕಾರಣ ಸದರಿ ಚಿಕ್ಕರಂಗಯ್ಯ 1 ನೇ ಪ್ರತಿವಾದಿಯ ಹೆಸರಿಗೆ ವಿಲ್ ಬರೆದಿರುತ್ತಾರೆ ಎಂದರೆ ಸಾಕ್ಷಿ ನಮಗೆ ಸೇರಿದ ಜಮೀನಿಗೆ ಸಂಬಂದಿಸಿದಂತೆ ವಿಲ್ ಬರೆದಿರುವುದಿಲ್ಲ ಎನ್ನುತ್ತಾರೆ. ರಂಗೇಗೌಡ ಬಿನ್ ಚಿಕ್ಕರಂಗಯ್ಯ ಎನ್ನುವವರು ನಮ್ಮ ಗ್ರಾಮದಲ್ಲಿರುತ್ತಾರೆ ಎಂದರೆ ಸರಿಯಲ್ಲ. ದಾವಾಸ್ವತ್ತು ಸದರಿ ರಂಗೇಗೌಡ ಬಿನ್ ಚಿಕ್ಕರಂಗಯ್ಯ ರವರಿಗೆ ಸೇರಿದ್ದು ಎಂದರೆ ಸರಿಯಲ್ಲ. ರಂಗೇಗೌಡರವರ ತಂದೆಯ ಹೆಸರು ಚಿಕ್ಕರಂಗಯ್ಯರವರು ದಾವಾಸ್ವತ್ತಿನ ಖಾತ ಮತ್ತು ಪಹಣಿಯನ್ನು ಅವರ ಹೆಸರಿಗೆ ವರ್ಗಾಯಿಸಿಕೊಳ್ಳದೇ ಇರುವುದರಿಂದ ಚಿಕ್ಕರಂಗಯ್ಯರವರ ಹೆಸರಿನಲ್ಲಿ ಪಹಣಿ ಮುಂದುವರಿದಿರುತ್ತದೆ ಎಂದರೆ ಸರಿಯಲ್ಲ.

ರಂಗೇಗೌಡ ಬಿನ್ ಚಿಕ್ಕರಂಗಯ್ಯರವರು ದಾವಾಸ್ವತ್ತನ್ನು 1986 ರಲ್ಲಿ ಚಿಕ್ಕರಂಗಯ್ಯ ಬಿನ್ ಹೊನ್ನಯ್ಯರವರಿಗೆ ಕ್ರಯದ ಕರಾರನ್ನು ಬರೆದುಕೊಟ್ಟು ಅದರ ಸ್ವಾಧೀನವನ್ನು ಬಿಟ್ಟುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಅಂದಿನಿಂದಲೂ ದಾವಾಸ್ವತ್ತಿನ ಅನುಭವದಲ್ಲಿ ಚಿಕ್ಕರಂಗಯ್ಯ ಬಿನ್ ಹೊನ್ನಯ್ಯರವರು ಇರುತ್ತಾರೆ ಎಂದರೆ ಸರಿಯಲ್ಲ. ಅವರ ಮರಣದ ನಂತರ ಅವರ ಸಾಕುಮಗ 1ನೇ ಪ್ರತಿವಾದಿ ದಾವಾಸ್ವತ್ತಿನ ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿಯಲ್ಲ. ಸದರಿ ವಿಲ್ ನಂತರ ದಾವಾಸ್ವತ್ತಿನ ಖಾತೆ ಮತ್ತು ಪಹಣಿ 1 ನೇ ಪ್ರತಿವಾದಿಯಹೆಸರಿಗೆ ವರ್ಗಾವಣೆ ಆಗಿರುತ್ತದೆ ಎಂದರೆ ಸರಿಯಲ್ಲ. ದಾವಾಸ್ವತ್ತಿನ ಖಾತೆ ಮತ್ತು ಪಹಣಿ 1 ನೇ ಪ್ರತಿವಾದಿಯ ಹೆಸರಿಗೆ ವರ್ಗಾವಣೆಯಾದಾಗ ಅವರನ್ನುಪ್ರಶ್ನಿಸಿರುತ್ತೇನೆ. ಸದರಿ ಖಾತೆ ಮತ್ತು ಪಹಣಿಯನ್ನು ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸಿರುವುದಿಲ್ಲ. 1ನೇ ಪ್ರತಿವಾದಿ ಅವರ ದರ್ದು ನಿಮಿತ್ತ ದಾವಾಸ್ವತ್ತನ್ನು ದಿಃ 10-11-2016 ರ ಕ್ರಯಪತ್ರದ ಮುಖಾಂತರ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಕ್ರಯಪತ್ರದ ಮೇರೆಗೆ ದಾವಾಸ್ವತ್ತಿನ ಖಾತೆ ಮತ್ತು ಪಹಣಿ 4 ನೇ ಪ್ರತಿವಾದಿಯ ಹೆಸರಿಗೆ ವರ್ಗಾವಣೆಯಾಗಿರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರಿದು ಆದ್ದರಿಂದ ನಾನು ಈ ದಾವೆಯನ್ನು ಸಲ್ಲಿಸಿರುತ್ತೇನೆ ಎನ್ನುತ್ತಾರೆ. 4 ನೇ ಪ್ರತಿವಾದಿ ದಾವಾಸ್ವತ್ತನ್ನು ಖರೀದಿಸಿ,ದ ನಂತರ ಅದರಲ್ಲಿ ಕೊಳವೆ ಬಾವಿ ಕೊರೆಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಕೊಳವೆ ಬಾವಿಗೆ ವಿದ್ಯುತ್ ಸಂಪರ್ಕವನ್ನು ಪಡೇದುಕೊಂಡಿದ್ದು ಅದು 4 ನೇ ಪ್ರತಿವಾದಿಯ ಹೆಸರಿನಲ್ಲಿರುತ್ತದೆ ಎಂದರೆ ಸರಿಯಲ್ಲ. ಅಂದಿನಿಂದ 4ನೇ ಪ್ರತಿವಾದಿ ದಾವಾಸ್ವತ್ತಿನ ಸ್ವಾಧೀನದಲ್ಲಿದ್ದು ಅಡಿಕೆ ಬೆಳೆ ಬೆಳೆದಿರುತ್ತಾರೆ ಎಂದರೆ ಸಾಕ್ಷಿ ದಾವಾಸ್ವತ್ತಿನ ಸ್ವಾಧೀನದಲ್ಲಿ ನಾವು ಮತ್ತು 4ನೇ ಪ್ರತಿವಾದಿ ಇಬ್ಬರು ಇದ್ದು ಈಗ ನಮ್ಮಗಳ ನಡುವೆ ಗಲಾಟೆ ಉಂಟಾಗಿರುತ್ತದೆ ಎನ್ನುತ್ತಾರೆ. ದಾವಾಸ್ವತ್ತಿನ ಸಾವಧೀನದಲ್ಲಿ ಯಾರು ಇರುತ್ತಾರೆ ಎಂದು ದಾವಾಸ್ವತ್ತಿನ ಪಕ್ಕದ ಜಮೀನಿನವರಿಂದ ನಿಯೋಗಿಯ ಮೂಲಕ ಮಾಹಿತಿಯನ್ನು ಪಡೆಯಲು ನನಗೆ ಯಾವುದೇ ಅಭ್ಯಂತರ ಇರುವುದಿಲ್ಲ.

ನಮ್ಮ ಊರಿನಲ್ಲಿ ಚಿಕ್ಕರಂಗಯ್ಯ ಬಿನ್ ಲೇ.ಲಿಂಗಣ್ಣ ಎನ್ನುವವರು ಇರುತ್ತಾರೆ ಎಂದರೆ ಸರಿಯಲ್ಲ. ಅವರು ಸಹ ದಾವಾಸ್ವತ್ತು ತನಗೆ ಸೇರಿದ್ದು ಎಂದು ತಹಶೀಲ್ದಾರ್ ಗುಬ್ಬಿ ರವರಿಗೆ ಅರ್ಜಿ ಸಲ್ಲಿಸಿದ್ದರು ಎಂದರೆ ಸರಿಯಲ್ಲ. ಸದರಿ ಅರ್ಜಿಯ ಮೇರೆಗೆ ಆರ್.ಅರ್.ಟಿ.ಡಿಸ್.ಸಿ.ಆರ್.115/2016-17 ರಂತೆ ಪ್ರಕರಣ ನಡೆದು ಸದರಿ ಚಿಕ್ಕರಂಗಯ್ಯ ಬಿನ್ ಲಿಂಗಣ್ಣ ರವರಿಗೆ ದಾವಾಸ್ವತ್ತು ಸೇರಿರುವುದಿಲ್ಲ ಎಂದು ತಹಶೀಲ್ದಾರ್ ರವರು ಆದೇಶಿಸಿರುತ್ತಾರೆ ಎಂದರೆ ಸರಿಯಲ್ಲ.

ದಾವಾಸ್ವತ್ತಿನ ಪಕ್ಕದಲ್ಲಿ ನನ್ನ ಕುಟುಂಬದ ವಿಭಾಗದ ಮೂಲಕ ನನ್ನ ಭಾಗಕ್ಕೆ ಬಂದ ಜಮೀನು ಇರುತ್ತದೆ ಎಂದರೆ ಸರಿ. 4 ನೇ ಪ್ರತಿವಾದಿ ಅಂಗವಿಕಲರಾದ್ದರಿಂದ ಅದರ ದುರುಪಯೋಗಪಡಿಸಿಕೊಂಡು ಅವರಿಂದ ದಾವಾಸ್ವತ್ತನ್ನು ಲಪಟಾಯಿಸಲು ಈ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾಸ್ವತ್ತಿನ ಪಹಣಿಯಲ್ಲಿರುವ ಚಿಕ್ಕರಂಗಯ್ಯ ಮತ್ತು ನನ್ನ ತಂದೆ ಚಿಕ್ಕರಂಗಯ್ಯ ಬೇರೆಯಾಗಿದ್ದು ಅದನ್ನು ದುರುಪಯೋಗ ಪಡಿಸಿಕೊಂಡು ಅವರಿಂದ ದಾವಾಸ್ವತ್ತನ್ನು ಲಪಟಾಯಿಸಲು ಈ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಸುಮಾರು 1950 ರಿಂದಲೂ ದಾವಾಸ್ವತ್ತಿನ ಪಹಣಿಯಲ್ಲಿರುವ ಚಿಕ್ಕರಂಗಯ್ಯರವರ ಹೆಸರಿನಲ್ಲಿಯೇ ಕಂದಾಯ ದಾಖಲಾತಿಗಳು ಚಾಲ್ತಿಯಲ್ಲಿದ್ದು ಸದರಿ ಚಿಕ್ಕರಂಗಯ್ಯ ನನ್ನ ತಂದೆಯಲ್ಲ ಎಂದರೆ ಸರಿಯಲ್ಲ. ನನ್ನ ತಂದೆಯ ಜನನದ ಹಿಂದಿನಿಂದಲೂ ದಾವಾಸ್ವತ್ತಿನ ಕಂದಾಯ ದಾಖಲಾತಿಗಳಲ್ಲಿ ಚಿಕ್ಕರಂಗಯ್ಯರವರ ಹೆಸರು ಇತ್ತು ಎಂದರೆ ಸರಿಯಲ್ಲ. ನಾನು ಮತ್ತು ಇತರೆ ವಾದಿಗಳು ಸೇರಿ ದಾವಾಸ್ವತ್ತನು ಲಪಟಾಯಿಸಲು ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**
**ಓ . ಹೇ. ಕೇ. ಸರಿ. ಇದೆ**

**ಅಧಿಕ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್ ಸಿ , ಗುಬ್ಬಿ.**